ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೊಳವೆ ಬಾವಿಗಳಿಗೆ ಫಾರಿನ್ ಎಕ್ಸ್‌ಛೇಂಜು ಬರಬೇಕೆಂದು ಹೇಳಿದಿರಿ. ಬಾವಿಗಳನ್ನು ತೆಗೆಯುವ ಬಗ್ಗೆ ಪರಿಶೀಲನೆ ಮಾಡುತ್ತಿದೆಯೆಂದು ಹೇಳಿದಿರಿ. ಮೂರು-ನಾಲ್ಕು ಪಾಯಿಂಟುಗಳೂ ಪರಿಶೀಲನೆಯಲ್ಲಿವೆ ತೀರ್ಮಾನವಾಗದೆ; ಹೀಗಾದರೆ ಜಮೀನು ಸಾಗುವಳಿಗೆ ಬರುವುದು ಯಾವಾಗ?

ಶ್ರೀ ಎಚ್. ಸಿ. ಬೋರಯ್ಯ.—ಬಾವಿಗಳನ್ನು ನಿರ್ಮಿಸುವುದಕ್ಕೆ ನತತವಾದ ಪ್ರಯತ್ನ ಮಾಡುತ್ತಿದ್ದೇವೆ. ಬಹುಶಃ ಅದಷ್ಟು ಜಾಗ್ರತೆ ಅದು ಕೈಗೂಡಬಹುದು. ಬಾವಿಗಳನ್ನು ತೆಗೆಯುವುದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಅನ್ನುವುದು ತಮಗೆ ಈಗಾಗಲೇ ಗೊತ್ತಾಗಿರ ಬಹುದು ಎಂದು ತಿಳಿದುಕೊಂಡಿದ್ದೇನೆ. ಎಲೆಕ್ಟ್ರಿಕ್ ಪಂಪು ಸೆಟ್ಟುಗಳ ನರಬರಾಜು ನಿಂತಿದೆ. ಮೈನರ್ ಇರ್ರಿಗೇಶನ್ನಿಗೆ ಪವರ್ ಸಪ್ಲೈ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿರಲಿಕ್ಕೆ ನಾಕು.

ಶ್ರೀ ಎನ್. ಗೋಪಾಲಗೌಡ.—ನರಕಾರದವರ ಹತ್ತಿರ 16 ಬೋರ್‌ವೆಲ್ಲು ಯಂತ್ರಗಳಿವೆ ಎಂದು ಹೇಳಿದಿರಿ. ಈ ಯಂತ್ರಗಳನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆಯೊ ಇರಾಖೆಯವರು?

ಶ್ರೀ ಎಚ್. ಸಿ. ಬೋರಯ್ಯ.—12 ಕೆಲಸ ಮಾಡುತ್ತಿವೆ- ನಾಲ್ಕು ಸಿಕ್ (ಕಾಯಿಲೆ) ಇವೆ.

ಶ್ರೀ ಆರ್. ಎನ್. ಪಾಟೀರ್ ಪ್ರತಿಯೊಂದು ತಾಲ್ಲೂಕಿಗೂ ಎಷ್ಟೆಷ್ಟು ವಿದ್ಯುಚ್ಛಕ್ತಿ ಮತ್ತು ಎಣ್ಣೆ ಪಂಪುಗಳೆಷ್ಟು ಎಂದು ಇಲ್ಲಿಂದಲೇ ನಿಗದಿಮಾಡಿ ಕಳುಹಿಸಿತ್ತೀರೊ ಅನ್ನುವ ಅನುಮಾನ ಬಂದಿದೆ, ನಿಮ್ಮ ಉತ್ತರದಿಂದ?

ಶ್ರೀ ಎಚ್. ಸಿ. ಬೋರಯ್ಯ.—ಕಳುಹಿಸಿ ಕೊಡುತ್ತಾರೆ. ಬಂದಿರತಕ್ಕಂಥ ಅರ್ಜಿಗಳನ್ನು ಪರಿಶೀಲನೆ ಮಾಡಿ, ತಮ್ಮ ಮುಂದೆ ಸ್ವಾಕು ಏನಿದೆ ಎಂದು ನೋಡಿಕೊಂಡು ವಿಲೇವಾರಿಮಾಡುತ್ತಾರೆ.

Sri S. SIVAPPA.—The Parliamentary Secretary was pleased to say that with regard to the Minor Irrigation Schemes in South Kanara he has supplied information pertaining only to Agriculture Ministry. Has it come to the notice of the Government that the Chief Engineer, Public Works Department has issued instructions to his Department in Mangalore District that no fresh Minor Irrigation Works should be taken up?

ಶ್ರೀ ಎಚ್. ಸಿ. ಬೋರಯ್ಯ.—ಬಹುಶಃ ಇದು ಈ ಪ್ರಶ್ನೆಯ ವ್ಯಾಪ್ತಿಯೊಳಗೆ ಉದ್ಭವಿಸ ರಾರದು ಎಂದು ನನಗೆ ತೋರುತ್ತದೆ.

ಶ್ರೀ ಎನ್. ವಿ. ರಾಮೇಗೌಡ.—ಪಂಪುಗಳನ್ನು ಕೊಡುವಾಗ ರೈತರಿಗೆ ನರಕಾರದವರು ಎಂಟು ಕಂತುಗಳಲ್ಲಿ ವಾಪಸು ಕೊಡಬೇಕೆಂದು ಹೇಳಿದ್ದಾರೆ. ಇದನ್ನು ಹತ್ತು ಕಂತುಗಳಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಸಿ. ಬೋರಯ್ಯ.—ರೂಲ್ಸು ಪ್ರಕಾರ ಎಷ್ಟು ಕಂತುಗಳು ಎಂದು ನಿಗದಿ ಮಾಡ ರಾಗಿದೆಯೋ ಅದರಂತೆ ವಸೂಲುಮಾಡಲಾಗುತ್ತದೆ. ನರಿಯಾದ ನಮಯ ಬಂದ ಕಾಲದಲ್ಲಿ ಅದನ್ನು ಪರಿಶೀಲಸರಾಗುತ್ತದೆ.

———

Cases pending before the Deputy Commissioner, Tumkur.

*Q.—97. Sri ANDANAIAH (Kunigal).—

Will the Government be pleased to state :—

(*a*) the number of registration cases, appeals and original cases and cases on agricultural income-tax that have been filed before the Deputy Commissioner, Tumkur, since 1962-63, 1963-64 and 1964-65;

(*b*) how many of them that are pending at present and since how long they are pending?

A.—Sri M. V. KRISHNAPPA (Minister for Revenue).—

(a) Year	Regn. Cases	Rev. Appeals and Original Cases	Cases on Agrl. Income-Tax	Total
1962-63	18	120	1	139
1963-64	10	141	...	151
1964-65	4	74	...	78
	32	335	1	368

(*b*) Out of 368 cases, 241 are still pending. Of these, 49 and 124 cases are pending since 1962-63 and 1963-64 respectively. The remaining 68 cases pertain to the current year only.

ಶ್ರೀ ಅಂದಾನಯ್ಯ.—368 ಕೇಸುಗಳ ಪೈಕಿ 241 ಕೇಸುಗಳು ಇನ್ನೂ ಇತ್ಯರ್ಥವಾಗದೆ ಇವೆ ಎಂದು ಇಲ್ಲಿ ಹೇಳಿದ್ದೀರಿ. ಹೀಗೇ ಇಷ್ಟು ಕಾಲ ಉಳಿಯಲು ಕಾರಣಗಳೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅನೇಕ ಕೇಸುಗಳಲ್ಲಿ ಸಿವಿಲ್ಲು ಕೋರ್ಟುಗಳಿಂದ ಸಂಬಂಧಪಟ್ಟ ರಿಕಾರ್ಡುಗಳು ಹಾಗೂ ಇನ್ನಿತರ ಡಾಕ್ಯುಮೆಂಟುಗಳು ಬಂದಿಲ್ಲ. ಅಲ್ಲದೆ ಈಚೆಗೆ ಡೆಪ್ಯುಟಿ ಮಿನಿಸ್ಟರುಗಳಿಗೆ ಪುಡ್ ವರ್ಕ್ ಜಾಸ್ತಿಯಾಗಿ ಬಂದುದರಿಂದಾಗಿ ಅವರ ಕೆಲಸಗಳು ಜಾಸ್ತಿಯಾಗಿ ಸ್ವಲ್ಪ ನಿಧಾನವಾಯಿತು. ಅಲ್ಲದೆ ಈಗ ಈ ಡೆಪ್ಯುಟಿ ಕಮಿಷನರುಗಳು ಇನ್ನು ಮೂರು ತಿಂಗಳಲ್ಲಿ ಮುಗಿಸಲು ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅಲ್ಲಿರುವ ಜಿಲ್ಲಾಧಿಕಾರಿಗಳಿಗೆ ಕನ್ನಡ ಬಾರದೇ ಇರುವುದರಿಂದ ಇಷ್ಟು ಕೇಸುಗಳು ಅಲ್ಲಿ ಪೆಂಡಿಂಗ್‌ನಲ್ಲಿವೆ ಅಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕನ್ನಡ ಬರುವುದಕ್ಕೂ ಕೇಸುಗಳನ್ನು ಡಿಸ್‌ಪೋಸು ಮಾಡುವುದಕ್ಕೂ ಏನೂ ತೊಂದರೆ ಇಲ್ಲ. ಅವರಿಗೆ ಕನ್ನಡ ಮಾತನಾಡಲು ಬರುತ್ತದೆ ಮತ್ತು ಚೆನ್ನಾಗಿ ಕೆಲಸ ಮಾಡುತ್ತಾರೆ. ಕನ್ನಡ ಬಾರದೇ ಇದೆ ಎಂದು ಕೇಸುಗಳು ಏನೂ ಡಿಲೇ ಆಗಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—368 ಕೇಸುಗಳಲ್ಲಿ ಪೆಂಡಿಂಗ್ ಎಂದು ಹೇಳಿರುವುದರಲ್ಲಿ ಎಷ್ಟು ಕೇಸುಗಳು ಹಿಯರ್ ಮಾಡಿ ಅರ್ಗ್ಯುಮೆಂಟುಗಳಾಗಿ ಅರ್ಡರ್ಸ್‌ಗಾಗಿ ಪೋಸ್ಟು ಮಾಡಿರುವಂತಹವುಗಳು ?

ಶ್ರೀ ಎಂ. ವಿ. ಕೃಷ್ಣಪ್ಪ.—ವಿವರಗಳು ಇಲ್ಲಿಲ್ಲ. ಇದರಲ್ಲಿ 122 ಕೇಸುಗಳು ಡಿಸ್‌ಪೋಸ್ ಆಗಿ ಅರ್ಗುಮೆಂಟುಗಳಾಗಿರುವುದರಲ್ಲಿ ಇನ್ನೂ ಶೇಕಡಾ ಐವತ್ತರಷ್ಟು ಉಳಿದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—241 ಕೇಸುಗಳಲ್ಲಿ 227 ಕೇಸುಗಳು ಅರ್ಗ್ಯುಮೆಂಟಾಗಿ ಎರಡೂವರೆ ವರ್ಷಗಳಾದರೂ ಕೂಡ ಇನ್ನೂ ಇದರ ಬಗ್ಗೆ ಜಡ್ಜ್‌ಮೆಂಟು ಬರೆಯದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದಕ್ಕೆ ಅನೇಕ ಕಾರಣಗಳಿವೆ. ಇನ್ನು ಮೂರು ನಾಲ್ಕು ತಿಂಗಳಲ್ಲಿ ಮುಗಿಸುತ್ತೇವೆಂದು ಹೇಳಿದ್ದಾರೆ. ಅಲ್ಲದೆ ಇದರ ಬಗ್ಗೆ ನಾವೇನಾದರೂ ಅವರಿಗೆ ಬರೆದರೆ ಮಂತ್ರಿಗಳು ಹಸ್ತಕ್ಷೇಪ ಮಾಡುತ್ತಾರೆಂದು ನೀವೇ ಹೇಳುತ್ತೀರಿ.

ಶ್ರೀ ಕೆ. ಲಕ್ಕಪ್ಪ.—ಡೆಪ್ಯುಟಿ ಕಮಿಷನರುಗಳು ಕೆಲಸ ಮಾಡಬೇಕಾದರೆ ಮಂತ್ರಿಗಳ ಇಂಟರ್‌ಫಿಯರೆನ್ಸುಗಳು ಇರಲೇಬಾರದು, ಆಗಾಗ್ಗೆ ಮಂತ್ರಿಗಳು ಟೂರು ಬಂದಾಗ ಇಂಟರ್‌ಫಿಯರೆನ್ಸುಗಳಾಗುತ್ತಿರುವುದರಿಂದ ಅವರಿಗೆ ಕೆಲಸ ಮಾಡಲು ನಿಧಾನವಾಗುತ್ತದೆಯಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಂತ್ರಿಗಳು ಬಂದಾಗ ಡೆಪ್ಯುಟಿ ಕಮೀಷನರುಗಳು ಬರಲೇಬೇಕು, ಅವರಿಗೆ ಎಷ್ಟೋ ಡೆವಲಪ್‌ಮೆಂಟು ಕೆಲಸಗಳ ಬಗ್ಗೆ ಆದೇಶಗಳನ್ನು ನಲಹೆಗಳನ್ನೂ ಕೊಡಬೇಕಾಗುತ್ತದೆ. ಅಲ್ಲದೆ ಜಿಲ್ಲೆಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಅವರೊಡನೆ ಕುಳಿತು ಚರ್ಚೆ ಮಾಡಬೇಕಾಗಿ ಬರುತ್ತದೆ. ಅವರು ಬಂದರೆ ಅಂತಹ ಅಪರಾಧವೇನಾಗುವುದಿಲ್ಲ. ಅದನ್ನು ಮಂತ್ರಿಗಳು ಇಂಟರುಫಿಯರು ಮಾಡುತ್ತಾರೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—1962—63ರಲ್ಲಿ ಪೆಂಡಿಂಗ್ ಆಗಿರುವ ಕೇಸುಗಳು ಮೂರು ವರ್ಷಗಳಾದರೂ ಇನ್ನೂ ಪೆಂಡಿಂಗ್‌ನಲ್ಲಿರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆ ಸಂಬಂಧಪಟ್ಟ ಡಾಕ್ಯುಮೆಂಟುಗಳ ಸಿಕ್ಕದೇ ಇರಬಹುದು ಅಥವಾ ಬೇರೆ ಕಾರಣಗಳಿರಬಹುದು.

Sanction of Irrigation wells in Tumkur District.

*Q.—122. Sri B. BYRAPPAJI (Turuvekere).—

Will the Government be pleased to state :—

(*a*) the number of irrigation wells that were sanctioned in the year 1961-62, 1962-63, 1963-64 in Tumkur District (Talukwise information may be furnished);

(*b*) of those how many are completed ;

(*c*) what is the total extent of land brought under irrigation by these wells ;

(*d*) how many applications are still pending for sanction (year-wise and taluk-wise information may be furnished) ?

A.—Sri M V. KRISHNAPPA (Minister for Revenue).—

(*a*) to (*d*) The appended statement contains the required information.